**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 3837/2021**

| | | | |
|---|---|---|---|
| **ಹೆಸರು** | : | **ಶಿವರಾಮರೇಡ್ಡಿ** | **ದೋ.ಸಾ. 5** |
| **ತಂದೆಯ ಹೆಸರು** | : | **ಬಸವಂತರೇಡ್ಡಿ** | **ಪ್ರಾ.ಸಾ. 3** |
| **ವಯಸ್ಸು** | : | **65 ವರ್ಷ** | **ದಿನಾಂಕಃ 04-10-2023** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ಪರದಾರ ಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಮತ್ತು 5 ನೇ ಆರೋಪಿತರು ನನಗೆ ಗೊತ್ತು. ಈ ದಿನ ಗೈರು ಹಾಜರಿರುವ 4 ನೇ ಆರೋಪಿ ಸಹ ನನಗೆ ಗೊತ್ತು. ಪ್ರಾಸಾ-1, ಚಾಸಾ-4, ಹಾಗೂ ಚಾಸಾ-6 ರವರು ನನಗೆ ಗೊತ್ತು.

ದಿನಾಂಕಃ 08-06-2021 ರಂದು ಮಧ್ಯಾಹ್ನ 3 ರಿಂದ 3.30 ಗಂಟೆ ಸುಮಾರಿಗೆ ನಾನು ಮತ್ತು ಪ್ರಾಸಾ-1 ರವರು ನಮ್ಮ ಮನೆಯ ಹತ್ತಿರ ಮಾತನಾಡುತ್ತ ನಿಂತಾಗ 2 ಮತ್ತು 5 ನೇ ಆರೋಪಿತರು ಬಂದು ಬಡಿಗೆಯಿಂದ ಬೆನ್ನಿಗೆ, ಕೈಗೆ ಹೊಡೆದಿರುತ್ತಾರೆ. ಆದ್ದರಿಂದ ಪ್ರಾಸಾ-1 ರವರು ಕೆಳಗೆ ಬಿದ್ದಿರುತ್ತಾರೆ. ಆಗ ನಮ್ಮ ಮನೆಯ ಮೆಸ್ತ್ರಿಗಳು ಸಹ ಇದ್ದರು ನಾವು ಎಲ್ಲರೂ ಸೇರಿ ಜಗಳ ಬಿಡಿಸಿ ಕಳುಹಿಸಿರುತ್ತೇವೆ. ಯಾವ ಕಾರಣಕ್ಕಾಗಿ ಜಗಳ ಆಗಿದೆ ನನಗೆ ಗೊತ್ತಿಲ್ಲ.

ಈಗ ನೋಡುತಿರುವ 2 ನೇ ಆರೋಪಿ ಹಾಗೂ 5 ನೇ ಆರೋಪಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಈಗ ನೋಡುತಿರುವ ನಿಪಿ-4 ರ ಭಾವಚಿತ್ರ ನಮ್ಮ ಮನೆಯ ಮುಂದಿರುವ ಸ್ಥಳವಾಗಿದೆ. ನಂತರ ಪ್ರಾಸಾ-1 ಹಾಗೂ ಅಲ್ಲಿ ಬಂದಂತಹ ಆರೋಪಿತರು ಬಾಯಿ ಮಾಡಿಕೊಂಡು ಹೋಗಿರುತ್ತಾರೆ.

ಪ್ರಾಸಾ-1 ರವರಿಗೆ ಹಲ್ಲೆ ಮಾಡಿರುವ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತಿರುವ ಮು.ಮಾ-1 ರಿಂದ ಆರೋಪಿತರು ಪ್ರಾಸಾ-1 ರವರಿಗೆ ಹಲ್ಲೆ ಮಾಡಿರುವುದಿಲ್ಲ. ಬೇರೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ. ಪೊಲೀಸ ಠಾಣೆಯಲ್ಲಿ ನಾನು ಘಟನೆಯ ಬಗ್ಗೆ ಹೇಳಿಕೆ

ನೀಡಿದ್ದೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಗಿಡಗಳ ಮಾರಾಟದ ವಿಷಯವಾಗಿ ಪ್ರಾಸಾ-1 ಹಾಗೂ ಆರೋಪಿತರ ಮದ್ಯ ಜಗಳವಾಗಿದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆಗ ನಾನು ಹಾಗೂ ಚಾಸಾ4 ರವರು ಸೇರಿ ಜಗಳ ಬಿಡಿಸಿರುತ್ತೇವೆ ಎಂದರೆ ಸಾಕ್ಷಿ ಆಗ ನಾನು ಇರಲಿಲ್ಲ ಚಾಸಾ-4 ರವರು ನಂತರ ಬಂದಿರುತ್ತಾರೆ ಎಂದು ನುಡಿಯುತ್ತಾರೆ. 2 ಮತ್ತು 5 ನೇ ಆರೋಪಿತರು ಚಾಸಾ-4 ರವರ ಸೀರೆ ಎಳೆದು ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ನೋಡುತಿರುವ ಮು.ಮಾ-1 ರಿಂದಲೆ ಆರೋಪಿತರು ಪ್ರಾಸಾ-1 ರ ವರಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸಾಕ್ಷಿ ದೊಡ್ಡ ಬಡಿಗೆ ಇತ್ತು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರು ಸಮಯ ಕೋರಿದ್ದರಿಂದ 200-00 ರೂ. ಖರ್ಚು ಕೊಡುವಂತೆ ಆದೇಶಿಸಿ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**